| ಕರ್ನಾಟಕ ವಿಧಾನ ಪರಿಷತ್ತು | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 524 (747) |
| 2 | ಮಾನ್ಯ ಸದಸ್ಯರ ಹೆಸರು | ಶ್ರೀ ಡಿ.ಎಸ್.ಅರಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3 | ಉತ್ತರಿಸಬೇಕಾದ ದಿನಾಂಕ | 11/12/2023. |
| 4 | ಉತ್ತರಿಸಬೇಕಾದ ಸಚಿವರು | ಮಾನ್ಯ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಲ್ಲಿ ಬಹುತೇಕ ಔಷಧಿಗಳು ಲಭ್ಯವಿಲ್ಲದೆ ಇರುವುದರಿಂದ ಔಷಧಿಗಳನ್ನು ಬಡರೋಗಿಗಳು ಹೊರಗಡೆ ಖರೀದಿಸಬೇಕಾಗಿದ್ದು, ಲಭ್ಯವಿರುವ ಅನೇಕ ಔಷಧಿಗಳೂ ಸಹ ಕಳಪೆ ದರ್ಜೆಯವು ಎಂಬ ದೂರುಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ, ಟೆಂಡರಿನಲ್ಲಿ ಅಂಗೀಕಾರವಾದ ಔಷಧಿ ಮತ್ತು ಸರಬರಾಜು ಮಾಡುವ ಔಷದಿ ಮತ್ತು ಎರಡೂ ಬೇರೆ ಬೇರೆಯಾಗಿರುವುದರಿಂದ ಗಣಮಟ್ಟದ ಔಷಧಿಗಳನ್ನು ಸರಬರಾಜು ಮಾಡದಿರುವ ಬಗ್ಗೆ ಸೂಕ್ತವಾದ ತನಿಕೆಯನ್ನು ನಡೆಸಲಾಗಿದೆಯೇ? | ಮೆಗ್ಗಾನ್ ಬೋಧನಾ ಆಸ್ಪತ್ರೆಯಲ್ಲಿ ಅವಶ್ಯವಿರುವ ಎಲ್ಲಾ ಔಷದಿಗಳು ಲಭ್ಯವಿರುತ್ತದೆ. ಇವುಗಳಲ್ಲಿ ಯಾವುದೂ ಕಳಪೆ ಎಂದು ದೂರು ಬಂದಿರುವುದಿಲ್ಲ. ಯಾವುದೇ ಔಷಧಿಗಳು ಟೆಂಡರ್‌ಗಳಲ್ಲಿ ಅಂಗೀಕರಿಸಿ ಮತ್ತು ಸರಬರಾಜು ಮಾಡುವ ಔಷಧಿಗಳು ಬೇರೆ ಬೇರೆಯಾಗಿರುವುದಿಲ್ಲ. ಎಲ್ಲಾ ಸರಬರಾಜು ಔಷಧಿಗಳು ಗುಣಮಟ್ಟದಾಗಿರುವುದರಿಂದ ತನಿಖೆ ನಡೆಸುವ ಪ್ರಶ್ನೆ ಉದ್ಭವಿಸುವುದಿಲ್ಲ. ಸರಬರಾಜು ಸಂಸ್ಥೆಯು ಪ್ರತಿ ಬ್ಯಾಚ್ ಮಾಡುವ ಔಷಧಿಗಳಿಗೆ ಅನಾಲಿಟಿಕಲ್ ವರದಿ ಪಡೆದು ದಾಸ್ತಾನು ಪಡೆದು ನಂತರ ರೋಗಿಗಳಿಗೆ ಚಿಕಿತ್ಸೆಗೆ ವಿತರಿಸಲಾಗುತ್ತಿರುವುದರಿಂದ ಕಳಪೆ ದಾಸ್ತಾನು ಬರುವ ಸಾಧ್ಯತೆಯಿರುವುದಿಲ್ಲ. |
| ಆ) | ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಲ್ಲಿ ಅನೇಕ ವೈದ್ಯರು ಬೆಳಿಗ್ಗೆ ಬಯೋಮೆಟ್ರಿಕ್ ಹಾಜರಾತಿಯನ್ನು ನೀಡಿ ಹೊರಗಡೆ ಹೋಗುವುದು ಪ್ರತಿದಿನವೂ ನಡೆಯುತ್ತಿದ್ದು, ಕರ್ತವ್ಯದ ಸಮಯದಲ್ಲಿಯೇ ಅನೇಕ ವೈದ್ಯರ ಖಾಸಗಿ ಕ್ಲಿನಿಕ್ ಗಳನ್ನು ನಡೆಸುವುದರಿಂದ ಆಸ್ಪತ್ರೆಯಲ್ಲಿ ನುರಿತ ವೈದ್ಯರ ಕೊರತೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದನ್ನು ನಿಯಂತ್ರಣ ಮಾಡಲು ಸರ್ಕಾರ ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ; | ಸರ್ಕಾರದ ಆದೇಶದಂತೆ ಪ್ರತಿ ವೈದ್ಯರು ದಿನಕ್ಕೆ 03 ಬಾರಿ ಬೆಳಿಗ್ಗೆ 9.00 ಗಂಟೆಗೆ, ಮಧ್ಯಾಹ್ನ 2.00 ಗಂಟೆಗೆ ಮತ್ತು ಸಂಜೆ 4.00 ಗಂಟೆಗೆ ಬಯೋಮೆಟ್ರಿಕ್ ಹಾಜರಾತಿ ಹಾಕುತ್ತಿದ್ದು ಕರ್ತವ್ಯದ ಸಮಯದಲ್ಲಿ ಯಾವುದೇ ವೈದ್ಯರು ಖಾಸಗಿ ಪ್ರಾಕ್ಟಿಸ್‌ಗೆ ತೆರಳಿರುವುದು ಕಂಡು ಬಂದಿರುವುದಿಲ್ಲ. ಆದ್ದರಿಂದ ನುರಿತ ವೈದ್ಯರ ಕೊರತೆ ಕಂಡು ಬಂದಿರುವುದಿಲ್ಲ. |
| ಇ) | ಸಂಜೆ ನಾಲ್ಕು ಗಂಟೆಯ ನಂತರ ಮುಖ್ಯ ವಿಭಾಗಗಳ ನುರಿತ ವೈದ್ಯಕೀಯ ಸಿಬ್ಬಂದಿಗಳು ಕರ್ತವ್ಯದಲ್ಲಿ ಇಲ್ಲದೆ ಸ್ನಾತಕೋತ್ತರ ವಿದ್ಯಾರ್ಥಿಗಳು ಮತ್ತು ಹೌಸ್ ಸರ್ಜನ್ನುಗಳು ಮಾತ್ರ ಇದ್ದು ಸಿಬ್ಬಂದಿಗಳು ಲಭ್ಯವಿಲ್ಲದಿರುವುದರಿಂದ ರೋಗಿಗಳಿಗೆ ತೊಂದರೆಯಾಗುತ್ತಿದ್ದು, ಇದನ್ನು ಸರಿಪಡಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು; | ಸಂಜೆ 4.00 ಗಂಟೆ ನಂತರ ಪ್ರತಿ ವಿಭಾಗದಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳು ಮತ್ತು ಹೌಸ್‌ಸರ್ಜನ್‌ಗಳನ್ನು ಹೊರತುಪಡಿಸಿ ಆಯಾ ವಿಭಾಗದ ತಜ್ಞ ವೈದ್ಯರುಗಳು ಸಹ ಇರುತ್ತಿದ್ದು, ರೋಗಿಗಳಿಗೆ ಯಾವುದೇ ತೊಂದರೆ ಆಗಿರುವುದಿಲ್ಲ. |

| | | |
|---|---|---|
| ಈ) | ಸುಮಾರು ಒಂದು ವರ್ಷದ ಹಿಂದೆ ಮೆಗ್ಗಾನ್ ಆಸ್ಪತ್ರೆಯಲ್ಲಿ ವೈದ್ಯಕೀಯ ವಿದ್ಯಾರ್ಥಿನಿಯೊಬ್ಬಳು ಜನರಲ್ ಸರ್ಜರಿ ವಿಭಾಗದ ಸಹ ಪ್ರಾಧ್ಯಾಪಕರ ವಿರುದ್ಧ ಲೈಂಗಿಕ ದೌರ್ಜನ್ಯದ ಆರೋಪ ಮಾಡಿದ್ದು, ಆ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಸಂಸ್ಥೆಗೆ ಭೇಟಿ ನೀಡಿ ಅಧಿಕಾರಿಗಳ ಮತ್ತು ವಿಭಾಗದ ಮುಖ್ಯಸ್ಥರ ಸಭೆ ನಡೆಸಿ ಆರೋಪಿತ ಸಿಬ್ಬಂದಿಗೆ ಯೂನಿಟ್ (ಘಟಕ) ಮುಖ್ಯಸ್ಥರ ಹುದ್ದೆ ಪಿಜಿಗೈಡ್ ಮತ್ತು ಇತರೆ ಜವಾಬ್ದಾರಿ ಕರ್ತವ್ಯಗಳನ್ನು ನೀಡದಂತೆ ಲಿಖಿತವಾಗಿ ಸೂಚಿಸಿದ್ದರೂ ಈಗ ಅಂತಹ ನಿಬಂಧನೆಗಳನ್ನು ಉಲ್ಲಂಘನೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ | ದಿನಾಂಕ 15.07.2022ರಂದು ಮಹಿಳಾ ವೈದ್ಯಕೀಯ ವಿದ್ಯಾರ್ಥಿನಿಯ ಮೇಲೆ ಜನರಲ್ ಸರ್ಜರಿ ವಿಭಾಗದ ಸಹ ಪ್ರಾಧ್ಯಾಪಕರು ಲೈಂಗಿಕ ಆರೋಪ ಕುರಿತು Sexual Harassment of women at work place (prevention, prohibition and redressal) Act 2013ರಡಿ ಸ್ಥಾಪಿಸಲಾದ ಸ್ಥಳೀಯ ಸಮಿತಿಯಲ್ಲಿ ದೂರು ದಾಖಲಾಗಿದ್ದು ಸ್ಥಳೀಯ ಸಮಿತಿ ತನಿಖೆ ನಡೆಸಿ ವರದಿ ಸಲ್ಲಿಸಿದ್ದು, ಸದರಿ ವರದಿಯಲ್ಲಿ ವಿದ್ಯಾರ್ಥಿನಿ ದೂರು ಹಿಂಪಡೆದ ಹಿನ್ನಲೆಯಲ್ಲಿ ಪ್ರಕರಣ ಮುಕ್ತಾಯಗೊಳಿಸಲಾಗಿತ್ತು.<br><br>ಆದರೆ, ಸದರಿ ವಿದ್ಯಾರ್ಥಿನಿಯು ದಿನಾಂಕ:19.07.2022ರಂದು ಶಿವಮೊಗ್ಗ ಜಿಲ್ಲಾಧಿಕಾರಿಯವರ ಕಛೇರಿಗೆ ತೆರಳಿ ಪುನಃ ತನಿಖೆ ನಡೆಸಿ ನ್ಯಾಯ ಕೊಡಿಸುವಂತೆ ಕೋರಿದ್ದರ ಹಿನ್ನಲೆಯಲ್ಲಿ ಸ್ಥಳೀಯ ಸಮಿತಿಯಿಂದ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಸಮ್ಮುಖದಲ್ಲಿ ಮತ್ತೊಮ್ಮೆ ದಿನಾಂಕ:19.07.2022ರಂದು ತನಿಖೆ ನಡೆಸಿರುತ್ತಾರೆ. ಸದರಿ ವರದಿಯಲ್ಲಿ ವೈದ್ಯಕೀಯ ವಿದ್ಯಾರ್ಥಿನಿಯು ಜನರಲ್ ಸರ್ಜರಿ ವಿಭಾಗದ ಸಹ ಪ್ರಾಧ್ಯಾಪಕರು ಲೈಂಗಿಕ ದೌರ್ಜನ್ಯ ಎಸಗಿರುವುದು ಮೇಲ್ನೋಟಕ್ಕೆ ಸಾಬೀತಾಗಿದ್ದರಿಂದ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 2021, ನಿಯಮ 33ರನ್ವಯ ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತ್ತಿನಲ್ಲಿರಿಸಿ ಸರ್ಕಾರದ ಆದೇಶ ಸಂಖ್ಯೆ: ಎಂಇಡಿ 337 ಎಂಪಿಎಸ್ 2022 ದಿನಾಂಕ:21.07.2022ರಲ್ಲಿ ಆದೇಶಿಸಿಲಾಗಿತ್ತು. ನಂತರ ಸದರಿಯವರು ಘನ ಉಚ್ಚ ನ್ಯಾಯಾಲಯದ W.P.No:14846/2022, ದಿನಾಂಕ:25.07.2022ರಲ್ಲಿ ಅಮಾನತ್ತು ಆದೇಶಕ್ಕೆ ತಡೆಯಾಜ್ಞೆ ತಂದಿದ್ದು, ಪ್ರಕರಣ ವಿಚಾರಣೆಗೆ ಬಾಕಿಯಿರುತ್ತದೆ.<br><br>ಆರೋಪಿತ ಅಧಿಕಾರಿಗೆ ಯೂನಿಟ್ (ಘಟಕ) ಮುಖ್ಯಸ್ಥರ ಹುದ್ದೆ, ಪಿಜಿ ಗೈಡ್ ಮತ್ತು ಇತರೆ ಜವಾಬ್ದಾರಿಗಳನ್ನು ನೀಡದಂತೆ ಲಿಖಿತವಾಗಿ ಯಾವುದೇ ಸೂಚನೆ/ನಿಬಂಧನೆಗಳನ್ನು ನೀಡಿರುವುದಿಲ್ಲವಾದ್ದರಿಂದ ಉಲ್ಲಂಘನೆ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ. |

ಸಂಖ್ಯೆ: ಎಂಇಡಿ 647 ಎಂಪಿಎಸ್ 2023

**(ಡಾ. ಶರಣಪ್ರಕಾಶ ಆರ್. ಪಾಟೀಲ)**
ವೈದ್ಯಕೀಯ ಶಿಕ್ಷಣ ಹಾಗೂ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು.